
# ಶ್ರೀರಾಮಕೃಷ್ಣರ ಅಪ್ರಸಿದ್ಧ ಭಕ್ತರು

ಸ್ವರ್ಣಗೌರಿ



**ಭೋ**ರ್ಗರೆಯುವ ಮಳೆ ಸುರಿಯತೊಡಗಿದಾಗ ಚಿಕ್ಕಪುಟ್ಟ ಹಳ್ಳಕೊಳ್ಳಗಳು, ಕೆರೆ, ಬಾವಿ, ಸಮುದ್ರಗಳೆಲ್ಲಾ ತುಂಬಿ ಹರಿಯ ತೊಡಗುವುವು. ಹಾಗೆಯೇ ಅವತಾರಪುರುಷರು ಧರೆಗಿಳಿದು ಬಂದಾಗ ಅನೇಕ ಜನರು ಅವರ ಪ್ರಭಾವಲಯದೊಳಗೆ ಬಂದು ಅವರ ಅಹೇತುಕ ಕೃಪೆ, ಭಕ್ತಿ, ಮುಕ್ತಿಗಳನ್ನು ಪಡೆದು ಧನ್ಯರಾಗು ತ್ತಾರೆ, ಜೀವನದ ಸಾರ್ಥಕತೆಯನ್ನು ಪಡೆಯುತ್ತಾರೆ. ಸ್ವಾಮಿ ವಿವೇಕಾನಂದರು, "ಈ ಬಾರಿಯ ಅವತಾರದ ವಿಶೇಷವೆಂದರೆ ಶ್ರೀರಾಮಕೃಷ್ಣರು ಬ್ರಹ್ಮಕುಂಡಲಿನಿಯನ್ನೇ ಜಾಗೃತಗೊಳಿಸಿದರು" ಎಂದಿದ್ದಾರೆ.

ಅವತಾರವರಿಷ್ಠರಾದ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪ್ರಭೆ ನಾನಾ ದಿಕ್ಕುಗಳಲ್ಲಿ ಪಸರಿಸಿತ್ತು. ಆ ಪ್ರಭೆಯ ಆಧ್ಯಾತ್ಮಿಕ ಕಿರಣ ಗಳು ಎಲ್ಲರ ಅಂತರಂಗಗಳನ್ನೂ ಬೆಳಗಿದವು. ಆದರೆ ಆ ಪ್ರಭೆಯ ಪರಿಧಿಯೊಳಗೆ ಬಂದವರೆಲ್ಲಾ ಸಂನ್ಯಾಸಿಗಳಾಗಲಿಲ್ಲ. ಅವರವರ ಸಂಸ್ಕಾರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಂನ್ಯಾಸಿಯೋ, ಸಂಸಾರಿಯೋ ಆಗಬೇಕಾಯಿತು. ಅವರಲ್ಲಿ ಕೆಲವರು ನೇರ ಶಿಷ್ಯರಾದರು. ಮತ್ತೆ ಕೆಲವರು ಸಂಘದ ಆಧಾರ ಸ್ತಂಭಗಳಾದರು. ಮತ್ತೂ ಹಲವರು ಉನ್ನತ ಜೀವನವನ್ನು ನಡೆಸುತ್ತಾ ಆಧ್ಯಾತ್ಮಿಕತೆಯ ಉನ್ನತ ಸ್ಥಿತಿಗೇರಿದರು. ಇಂಥ ಈ ಭಕ್ತರಲ್ಲಿ ಕೆಲವರು ಪ್ರಸಿದ್ಧರಾದರೆ, ಮತ್ತೆ ಕೆಲವರು ಚಿಪ್ಪಿನೊಳಗಿರುವ ಮುತ್ತಿನಂತೆ ಜಗತ್ತಿನ ದೃಷ್ಟಿಗೆ ಅಗೋಚರವಾಗಿ ಉಳಿದರು. ಎಲೆ ಮರೆಯ ಕಾಯಿಯಂತೆ ಶ್ರೀರಾಮಕೃಷ್ಣರ ಲೀಲಾನಾಟಕದಲ್ಲಿ ನೇಪಥ್ಯದ ಹಿಂದೆಯೇ ಉಳಿದ ಹಲವಾರು ಭಕ್ತರ ಜೀವನಗಾಥೆ ಯನ್ನು ಸ್ಮರಿಸುವುದೇ ಈ ಲೇಖನ ಮಾಲೆಯ ಉದ್ದೇಶ.

ಶ್ರೀರಾಮಕೃಷ್ಣರ ಜೀವನ ಸಾಗರದಲ್ಲಿ ಅನೇಕ ಬಾಲಕ ಭಕ್ತರು, ಯುವಕರು ಮತ್ತು ವೃದ್ಧರು ತರಂಗಗಳಂತೆ ಬಂದು ಹೋಗಿದ್ದಾರೆ. ಅವರ ವೃತ್ತಾಂತಗಳು ಪರಮಹಂಸರ ಅನುಕಂಪಕ್ಕೆ ಸಾಕ್ಷಿಯಾಗಿವೆ. ಇವುಗಳನ್ನು ಸಂಗ್ರಹಿಸಿ, ನಮ್ಮ ಮುಂದಿಟ್ಟಿರುವ ಲೇಖಕಿ, ಆಶ್ರಮದ ಭಕ್ತರು, ಉತ್ತಮ ಲೇಖಕರು ಮತ್ತು ಭಾಷಣಕಾರರು.

ವಚನವೇದದ ಕರ್ತೃ, 'ಮ' ಎಂದೇ ಪ್ರಸಿದ್ಧರಾದ ಮಾಸ್ಟರ್ ಮಹಾಶಯರು ವಿವಿಧ ಶಾಲಾಕಾಲೇಜುಗಳಲ್ಲಿ ಪಾಠ ಹೇಳಿಕೊಡು ತ್ತಿದ್ದರು. ಆಧ್ಯಾತ್ಮಿಕ ಜೀವನದಲ್ಲಿ ಒಲವು ಇರುವ ಹುಡುಗರನ್ನು ಕಂಡರೆ ಕೂಡಲೇ ಅವರನ್ನು ಕರೆತಂದು ಪರಮಹಂಸರ ಪದತಲಕ್ಕೆ ಅರ್ಪಿಸುತ್ತಿದ್ದರು. ಶ್ರೀರಾಮಕೃಷ್ಣರಿಗೆ ಬಾಲಕರನ್ನು ಕಂಡರೆ ಪರಮ ಪ್ರೀತಿ. ಅದಕ್ಕೆ ಕಾರಣವನ್ನು ಅವರೇ ಹೀಗೆಂದು ಹೇಳು ತ್ತಾರೆ: "ಇಂಥ ಹುಡುಗರನ್ನು ನಾನು ಏಕೆ ಆಕರ್ಷಿಸುತ್ತಿದ್ದೇನೆ ಗೊತ್ತೆ? ಇಂಥವರು ಪರಿಶುದ್ಧ ಹೃದಯಿಗಳು – ಇವರಲ್ಲಿ ವಿಷಯಬುದ್ಧಿ ಇನ್ನೂ ಪ್ರವೇಶ ಮಾಡಿಲ್ಲ. ವಿಷಯಬುದ್ಧಿ ಇದ್ದಿತು ಎಂದರೆ ಉಪದೇಶವನ್ನು ಗ್ರಹಿಸಲು ಆಗುವುದಿಲ್ಲ. ಹೊಸ ಮಡಕೆಯಲ್ಲಿ ಹಾಲನ್ನು ಇಡಬಹುದು. ಮೊಸರಿನ ಮಡಕೆಯಲ್ಲಿ ಹಾಲನ್ನು ಇಟ್ಟರೆ ಅದು ಒಡೆದುಹೋಗುತ್ತದೆ. ಯಾವ ಪಾತ್ರೆಯಲ್ಲಿ ಬೆಳ್ಳುಳ್ಳಿ ರಸವನ್ನು ಹಾಕಿ ಇಟ್ಟಿತ್ತೋ ಅದನ್ನು ಒಂದು ಸಾವಿರಸಲ ತೊಳೆಯಿರಿ, ಆದರೂ ಅದು ಬೆಳ್ಳುಳ್ಳಿ ವಾಸನೆಯಿಂದ ಪಾರಾಗದು" [ ಶ್ರೀರಾಮಕೃಷ್ಣ ವಚನವೇದ, ೨೫ನೆ ಫೆಬ್ರವರಿ ೧೮೮೫ ದಿನಾಂಕದ ಸಂವಾದ ನೋಡಿ]. ಆದ್ದರಿಂದ ಅಂತಹ ಬಾಲಕರ ಆಧ್ಯಾತ್ಮಿಕ ಉನ್ನತಿಯ ಬಗ್ಗೆ ಪರಮಹಂಸರು ಬಹಳ ಆಸ್ಥೆ ವಹಿಸುತ್ತಿದ್ದರು.

ಹೀಗೆ ಶ್ರೀರಾಮಕೃಷ್ಣರ ಬಳಿಗೆ ಬಂದ ಬಾಲಕರಲ್ಲಿ ಪೂರ್ಣ ಚಂದ್ರ, ಚಿಕ್ಕ ನರೇನ, ದ್ವಿಜ, ನಾರಾಯಣ, ಭವನಾಥ, ಪಲ್ಟು, ಕ್ಷಿರೋದೆ, ಬಂಕಿಮ, ಬಿನೋದೆ, ತೇಜಚಂದ್ರ, ನಿತ್ಯಗೋಪಾಲ ಮುಂತಾದ ಹತ್ತಾರು ಬಾಲಕರು ಪ್ರಮುಖರು. ಈ ಬಾಲಕರನ್ನು ಕಂಡ ಕೂಡಲೇ ಶ್ರೀರಾಮಕೃಷ್ಣರ ಮನಸ್ಸು ಊರ್ಧ್ವಮುಖ ವಾಗುತ್ತಿತ್ತು. ಅವರುಗಳನ್ನು ಕೆಲವು ದಿನ ಕಾಣದಿದ್ದರೆ ಚಡ ಪಡಿಸುತ್ತಿದ್ದರು, ಅವರಿಗೆ ಹೇಳಿ ಕಳುಹಿಸುತ್ತಿದ್ದರು. ಒಂದೇ ಆಂತರಿಕ ಪ್ರಕೃತಿಯ ಮತ್ತು ವಯಸ್ಸಿನ ಹುಡುಗರನ್ನು ಕಂಡರೆ ಇಬ್ಬರೂ ಆಧ್ಯಾತ್ಮಿಕ ಉನ್ನತಿ ಹೊಂದಲೆಂದು ಅವರನ್ನು ಜೊತೆ ಮಾಡುತ್ತಿದ್ದರು. "ಕೆಲವು ಗಿಡಗಳಲ್ಲಿ ಮೊದಲು ಕಾಯಿ ಬಿಡುತ್ತದೆ, ನಂತರ ಹೂವು ಅರಳುತ್ತದೆ. ಈ ಬಾಲಕರು ಹಾಗೆ – ಮೊದಲು ಇವರಿಗೆ ಭಗವಂತನ ದರ್ಶನ ದೊರೆಯುತ್ತದೆ, ಬಳಿಕ ಆತನ ಗುಣ, ಮಹಿಮೆ ಕೇಳುತ್ತಾರೆ; ಕೊನೆಗೆ ಆತನಲ್ಲಿ ಐಕ್ಯವಾಗು ತ್ತಾರೆ" ಎಂದು ಈ ಬಾಲಕರ ಬಗ್ಗೆ ಶ್ರೀರಾಮಕೃಷ್ಣರು ಆಗಾಗ್ಗೆ ಹೇಳುತ್ತಿದ್ದರು. ಈ ಬಾಲಕರ ಜೀವನದಲ್ಲಿ ಶ್ರೀರಾಮಕೃಷ್ಣರ

ಪ್ರಭಾವ ಹೇಗಾಯಿತು ಎಂಬುದನ್ನು ಈಗ ಕೂಲಂಕಷವಾಗಿ ನೋಡೋಣ.

### ಚಿಕ್ಕ ನರೇನ

ಚಿಕ್ಕ ನರೇನನು ಶ್ರೀರಾಮಕೃಷ್ಣರ ಬಳಿಗೆ ಬಂದಾಗ ಅವನು ಕೇವಲ ಹನ್ನೆರಡು ಹದಿಮೂರು ವರ್ಷದ ಬಾಲಕ. ಆತನ ಸರಳಸ್ವಭಾವ ಪರಮಹಂಸರನ್ನು ಬಹಳವಾಗಿ ಆಕರ್ಷಿಸಿತ್ತು. ವ್ಯಾಸಂಗದಲ್ಲಿ ಬುದ್ಧಿವಂತನಾದ ಆತ ಹುಡುಗನಾಗಿದ್ದಾಗಲೇ ಶಾಲೆಯಿಂದ ಬಂದೊಡನೆಯೇ ಭಗವಂತನಿಗಾಗಿ ಅಳುತ್ತಿದ್ದ. ದೇವರಿಗಾಗಿ ಅಳುವುದೇನು ಸಾಮಾನ್ಯವೇ ಎಂದು ಶ್ರೀರಾಮಕೃಷ್ಣರು ಅವನ ಬಗ್ಗೆ ಮೆಚ್ಚುಗೆಯಿಂದ ನುಡಿಯುತ್ತಿದ್ದರು. ಚಿಕ್ಕ ನರೇನನು ಕೆಲವೊಮ್ಮೆ ದಕ್ಷಿಣೇಶ್ವರಕ್ಕೆ ಹೋಗಿ, ಒಂದೇ ಸಮನೆ ಮೂರು ರಾತ್ರಿಗಳನ್ನು ಕಳೆದುಬಿಡುತ್ತಿದ್ದನು. ಇವನು ಇಷ್ಟು ಚಿಕ್ಕ ವಯಸ್ಸಿನಲ್ಲೇ ಶ್ರೀರಾಮಕೃಷ್ಣರ ಬಳಿಗೆ ಹೋಗುವುದು ಮನೆಯವರಿಗೆ ಸಮ್ಮತವಿರಲಿಲ್ಲ. ಆದರೆ ನಿರ್ಭಯ ಸ್ವಭಾವದವನಾದ ಚಿಕ್ಕ ನರೇನ್ ಮನೆಯವರ ಬೈಗುಳ, ಬೆದರಿಕೆಗಳಿಗೆ ಅಂಜುತ್ತಿರಲಿಲ್ಲ.

ಪರಿಶುದ್ಧ ಹೃದಯದ ನರೇನನ್ನು ನೋಡಿದ ಕೂಡಲೇ ಶ್ರೀರಾಮಕೃಷ್ಣರು ಸಮಾಧಿಸ್ಥರಾಗುತ್ತಿದ್ದರು. ದೇಹದ ಅವಯವಗಳನ್ನು ಪರೀಕ್ಷಿಸಿ ಆಧ್ಯಾತ್ಮಿಕ ಪ್ರಗತಿಯನ್ನು ಕಂಡುಹಿಡಿಯಬಲ್ಲ ಶ್ರೀರಾಮಕೃಷ್ಣರು ಬಾಲಕನ ವಿಶಾಲವಾದ ವಕ್ಷಸ್ಥಲವನ್ನು ಕಂಡು, "ನೀನು ಮುಂದುವರಿಯುವೆ, ಖಂಡಿತ ನಿನಗೆ ಜಯ ಲಭಿಸುತ್ತದೆ" ಎಂದು ಆಶೀರ್ವದಿಸಿದರು. ಒಮ್ಮೆ ಶ್ರೀರಾಮಕೃಷ್ಣರು ಅವನಿಗೆ ತಮ್ಮ ಕೈಯಾರೆ ಉಣಿಸಿದರು. ಸಾಮಾನ್ಯವಾಗಿ ಅವರು ಈ ರೀತಿ ಮಾಡುತ್ತಿದ್ದದ್ದು ಬಹಳ ಪ್ರೀತಿಪಾತ್ರರಿಗೆ ಮಾತ್ರ. ಆಗಾಗ್ಗೆ ಕುಂಭಕ, ಸಮಾಧಿಗಳ ಸ್ಥಿತಿಯನ್ನು ಹೊಂದುತ್ತಿದ್ದ ನರೇನನದು ಪುರುಷಭಾವ. ಆದ್ದರಿಂದ ಅವನು ಧ್ಯಾನದ ಸಮಯದಲ್ಲಿ ಸಂಪೂರ್ಣವಾಗಿ ಇಷ್ಟದೇವತೆಯಲ್ಲಿ ಲೀನವಾದರೂ ಭಾವಗಳನ್ನು ತೋರ್ಪಡಿಸುತ್ತಿರಲಿಲ್ಲ. ಶ್ರೀರಾಮಕೃಷ್ಣ ವಚನವೇದದಲ್ಲಿ ಆತನ ಮುಂದಿನ ಜೀವನದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಆದರೂ ಪರಿಶುದ್ಧ ಭಕ್ತಿಯನ್ನು ಪಡೆಯುವುದೇ ತನ್ನ ಗುರಿ ಎನ್ನುತ್ತಿದ್ದ ಈ ಬಾಲಕನು ಶ್ರೀರಾಮಕೃಷ್ಣರ ಕೃಪಾಶೀರ್ವಾದಗಳಿಂದ ನಿಸ್ಸಂಶಯವಾಗಿ ಗುರಿ ಮುಟ್ಟಿರಬಹುದೆಂದು ನಾವು ಊಹಿಸಬಹುದು.

### ದ್ವಿಜ

ಶ್ರೀರಾಮಕೃಷ್ಣರ ಅಂತರಂಗ ಭಕ್ತರ ಗುಂಪಿಗೆ ಸೇರಿದ ದ್ವಿಜನು ಪರಮಹಂಸರನ್ನು ಮೊದಲ ಬಾರಿ ಕ್ರಿಶ ೧೮೮೪ ರಲ್ಲಿ ಭೇಟಿಯಾದಾಗ ಅವನಿಗೆ ಕೇವಲ ಸುಮಾರು ಹದಿನಾರು ವರ್ಷ. ಆತನಲ್ಲಿದ್ದ ಭಗವಂತನಲ್ಲಿನ ಅನುರಾಗ ಬಹಳ ವಿಶೇಷವಾದದ್ದು. ಇದಕ್ಕಾಗಿಯೇ ಶ್ರೀರಾಮಕೃಷ್ಣರು ಆತನನ್ನು ಬಹಳವಾಗಿ ಆದರಿಸುತ್ತಿದ್ದರು. ಆತ ವಚನವೇದದ ಕರ್ತೃ 'ಮ' ನ ಬಂಧುವೂ ಆಗಿದ್ದನು. ದ್ವಿಜನ ತಾಯಿ ಮರಣಹೊಂದಿದ ಮೇಲೆ, ಅವನ ತಂದೆ ಎರಡನೆಯ ಮದುವೆಯಾಗಿದ್ದನು. ಕೊಲ್ಕತಾದಲ್ಲಿಯೇ ಒಂದು ವಾಣಿಜ್ಯ ಸಂಸ್ಥೆಯ ಮ್ಯಾನೇಜರ್ ಆಗಿದ್ದ ಆತ ಕಾನೂನು ಶಿಕ್ಷಣ ಪಡೆದುಕೊಂಡಿದ್ದನು. ಮಗ ಆಗಾಗ 'ಮ' ನೊಡನೆ ದಕ್ಷಿಣೇಶ್ವರಕ್ಕೆ ಹೋಗಿ ಬರುವುದು ತಂದೆಗೆ ಹಿಡಿಸುತ್ತಿರಲಿಲ್ಲ. ಆದರೂ ಪರಮಹಂಸರನ್ನು ನೋಡಿಬರಬೇಕೆಂಬ ಇಚ್ಛೆ ಅವನಿಗೂ ಬಹಳ ಕಾಲದಿಂದಲೂ ಇತ್ತು. ಆದ್ದರಿಂದ, ೯ ನೇ ಆಗಸ್ಟ್ ೧೮೮೫ ರಂದು ದ್ವಿಜನೊಡನೆ ತಂದೆಯೂ ಪರಮಹಂಸರ ದರ್ಶನಕ್ಕೆಂದು ಹೊರಟನು. ಸದಾ ಗಾಢಸಮಾಧಿ, ಭಾವಗಳಲ್ಲೇ ವಿಹರಿಸುತ್ತಿದ್ದ ಪರಮಹಂಸರಿಗೆ ಅದ್ಭುತವಾದ ವ್ಯವಹಾರ ಚತುರತೆಯೂ ಇತ್ತು. ದ್ವಿಜನ ತಂದೆಯನ್ನು ಬಹಳ ಆದರದಿಂದ ಉಪಚರಿಸಿ ಅವನ ಮನಸ್ಸನ್ನು ಒಂದೇ ದಿನದಲ್ಲಿ ಗೆದ್ದುಬಿಟ್ಟರು.

"ಒಳ್ಳೆಯ ಮಕ್ಕಳು ಹುಟ್ಟಿದರು ಎಂದರೆ ತಂದೆಯ ಪುಣ್ಯ ಎಂಥದು ಎಂಬುದನ್ನು ಅದು ತೋರಿಸುತ್ತದೆ. ಕೊಳದಲ್ಲಿ ಒಳ್ಳೆ ನೀರು ಬಂತು ಎಂದರೆ, ತೋಡಿಸಿದವ ಎಂಥ ಪುಣ್ಯಶಾಲಿಯಾಗಿರಬೇಕೆಂದು ಅದು ತೋರಿಸುತ್ತದೆ" ಎಂದು ನಾನಾ ವಿಧವಾಗಿ ಮಾತನಾಡಿ ಪರಮಹಂಸರು ದ್ವಿಜನ ತಂದೆಯ ಮನವೊಲಿಸಿಕೊಂಡರು. ಅದೂ ಇದೂ ಮಾತನಾಡುತ್ತಾ ಮಂದಲಿಗೆಯ ಮೇಲೆ ಬಂದು ಕುಳಿತು, ಆತನ ಶರೀರವನ್ನು ಮೃದುವಾಗಿ ಸವರುತ್ತಾ, ತಮ್ಮ ಸ್ಪರ್ಶದ ಮೂಲಕ ಅವನ ಮನಸ್ಸನ್ನೇ ಪರಿವರ್ತಿಸಿಬಿಟ್ಟರು. ಹೀಗೆ ದ್ವಿಜನ ಹಾದಿಯಲ್ಲಿನ ವಿಘ್ನವನ್ನು ಪರಮಹಂಸರು ಬಹು ಕುಶಲತೆಯಿಂದ ನಿವಾರಿಸಿದರು. ಗಾಜಿನ ಪೆಟ್ಟಿಗೆಯಲ್ಲಿರುವ ವಸ್ತುಗಳು ಹೇಗೆ ಕಣ್ಣಿಗೆ ಗೋಚರವಾಗುವುವೋ ಹಾಗೇ ವ್ಯಕ್ತಿಯನ್ನು ನೋಡಿದ ಕೂಡಲೆ, ಆತನ ಜನ್ಮಜನ್ಮಾಂತರದ ಸಂಸ್ಕಾರಗಳು ಶ್ರೀರಾಮಕೃಷ್ಣರಿಗೆ ಗೋಚರಿಸುತ್ತಿದ್ದವು. ಆದ್ದರಿಂದಲೇ ದ್ವಿಜನು ಆಧ್ಯಾತ್ಮಿಕ ಮಾರ್ಗದಲ್ಲಿ ಎಷ್ಟು ಮುಂದುವರಿದಿದ್ದಾನೆ ಎಂಬುದರ ಅರಿವು ಅವರಿಗಾಯಿತು. ವಚನವೇದದಲ್ಲಿ ದ್ವಿಜನು ಶ್ರೀರಾಮಕೃಷ್ಣರನ್ನು ಬಲರಾಮನ ಮನೆಯಲ್ಲಿ ಮೂರು ಬಾರಿ ಹಾಗೂ ದಕ್ಷಿಣೇಶ್ವರದಲ್ಲಿ ಏಳು ಬಾರಿ ಭೇಟಿ ಮಾಡಿದುದರ ವರ್ಣನೆಯಿದೆ. ಈತನ ಭವಿಷ್ಯ ಜೀವನದ ಬಗ್ಗೆ ವಚನವೇದದಲ್ಲಿ ಮಾಹಿತಿ ದೊರೆಯದಿದ್ದರೂ ಶ್ರೀರಾಮಕೃಷ್ಣರು ಮಾಸ್ಟರಿಗೆ ದ್ವಿಜನ ಬಗ್ಗೆ ಹೇಳಿದ ಈ ನುಡಿಗಳಲ್ಲಿ ಆತನಿಗೆ ಖಂಡಿತವಾಗಿ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಜಯ ಲಭಿಸಿತೆಂದು ಓದುಗರು ಊಹಿಸಬಹುದು: "ದ್ವಿಜ ಎಂಥ ಅದ್ಭುತ ಅವಸ್ಥೆಯಲ್ಲಿದ್ದಾನೆ!... ಅವನಿಗೆ ನಿಜವಾಗಿಯೂ ಎಲ್ಲವೂ ದೊರೆತುಬಿಡುತ್ತದೆ."

### ಪಲ್ಟು

ಶ್ರೀರಾಮಕೃಷ್ಣರ ಭಕ್ತರಲ್ಲಿ ಅತ್ಯಂತ ಕಿರಿಯವನೆಂದರೆ ಪಲ್ಟು. ಈತನ ತಂದೆ ಡೆಪ್ಯುಟಿ ಮ್ಯಾಜಿಸ್ಟ್ರೇಟ್. ಎಲ್ಲ ಹುಡುಗರ ಕಥೆಯಂತೆ ಪಲ್ಟುವಿನ ಮನೆಯವರಿಗೂ ಹುಡುಗನು ಪರಮಹಂಸರ ಸಹವಾಸ ಮಾಡುತ್ತಿರುವುದು ಒಪ್ಪಿಗೆಯಾಗಿರಲಿಲ್ಲ. ಆದರೆ ಬಾಲಕನಾಗಿದ್ದಾಗಲೇ ನಿರ್ಭಯನಾಗಿದ್ದ ಪಲ್ಟು ತಂದೆಯ ವಿರೋಧವನ್ನು

ಧೈರ್ಯವಾಗಿ ಎದುರಿಸುತ್ತಿದ್ದ. "ಹೌದು, ನಾನು ಪರಮಹಂಸರ ಹತ್ತಿರ ಹೋಗುತ್ತಿದ್ದೇನೆ; ಅದೇನು ಕೆಟ್ಟ ಕೆಲಸವೇನು?" ಎಂದು ಕೆಚ್ಚೆದೆಯಿಂದ ತಂದೆಯನ್ನೇ ಮರುಪ್ರಶ್ನಿಸುತ್ತಿದ್ದ. ವಚನವೇದದಲ್ಲಿ ೭ ನೇ ಮಾರ್ಚ್, ೧೮೮೫ ರಲ್ಲಿ ದಕ್ಷಿಣೇಶ್ವರಲ್ಲಿ ಅವನು ಮೊದಲ ಬಾರಿ ಪರಮಹಂಸರೊಡನೆ ಸಂಭಾಷಣೆ ಮಾಡಿದ ವಿವರಣೆಗಳು ದೊರೆಯುತ್ತವೆ. ಆದರೂ ಅವರಿಬ್ಬರಿಗೂ ಬಹಳ ಹಿಂದಿನಿಂದ ಪರಿಚಯವಿದ್ದಂತೆ ಆ ಸಂಭಾಷಣೆಯಿಂದ ತೋರುತ್ತದೆ. ಪಲ್ಟುವಿನ ಮನಸ್ಸು ನಿರ್ಮಲವಾಗಿದ್ದ ಕಾರಣ ಶ್ರೀರಾಮಕೃಷ್ಣರು ಹರಿಸುತ್ತಿದ್ದ ಹಾಸ್ಯದ ಹೊನಲಿಗೆ ಅವನು ನಗುತ್ತಾ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದ. ಅವನ ಮುಂದಿನ ಜೀವನದ ಬಗ್ಗೆ ನಮಗೆ ಏನೂ ತಿಳಿಯದು. ಆದರೂ ಶ್ರೀರಾಮಕೃಷ್ಣರು ಒಮ್ಮೆ ಭಾವದಲ್ಲಿ, "ನಿನಗೂ ದೊರೆಯುತ್ತದೆ, ಆದರೆ ಸ್ವಲ್ಪ ನಿಧಾನವಾಗಿ" ಎಂದು ಹೇಳಿದರು. ಅದರಿಂದ ಪಲ್ಟು ತನ್ನ ಗುರಿ ಮುಟ್ಟಿರಬೇಕೆಂದು ಊಹಿಸಿಕೊಳ್ಳಬಹುದು.

**ಕ್ಷಿರೋದೆ**

ಕ್ಷಿರೋದೆ ಸಹ ಮಾಸ್ಟರ್ ಮಹಾಶಯರ ಶಾಲೆಯಲ್ಲಿ ಓದುತ್ತಿದ್ದ ಒಬ್ಬ ಬಾಲಕ. ಪರಮಹಂಸರನ್ನು ಮೊದಲ ಬಾರಿ ೬ ನೇ ಏಪ್ರಿಲ್, ೧೮೮೫ ರಂದು ಭೇಟಿ ಮಾಡಿದಾಗ ಆತನಿಗೆ ಕೇವಲ ೧೨ ವರ್ಷ ವಯಸ್ಸು. ಮಾಸ್ಟರ್ ಮಹಾಶಯರು ಬಾಲಕನನ್ನು ಬಲರಾಮನ ಮನೆಗೆ ಮೊದಲ ಬಾರಿ ಕರೆತಂದು, 'ಈತನು ತುಂಬಾ ಒಳ್ಳೆಯ ಹುಡುಗ. ಆಧ್ಯಾತ್ಮಿಕ ವಿಷಯಗಳನ್ನು ಕೇಳುವುದರಲ್ಲಿ ತುಂಬಾ ಆನಂದಪಡುತ್ತಾನೆ' ಎಂದು ಪರಿಚಯಿಸಿದರು. ಪರಮಹಂಸರು ನಗುತ್ತಾ, "ಈತನಿಗೆ ಜಿಂಕೆಯ ಕಣ್ಣುಗಳಿವೆ" ಎಂದರು. ಕ್ಷಿರೋದೆ ಶ್ರೀರಾಮಕೃಷ್ಣರ ಪಾದಗಳನ್ನು ಭಕ್ತಿಯಿಂದ ಸ್ಪರ್ಶಿಸಿ, ಅಲ್ಲಿಯೇ ಕುಳಿತನು.

೫ ನೇ ಜನವರಿ, ೧೮೮೬ ರಂದು ಶ್ರೀರಾಮಕೃಷ್ಣರು ಮಾಸ್ಟರ್ ಮಹಾಶಯನನ್ನು ಕುರಿತು, "ಈ ಬಾಲಕರಿಗೆಲ್ಲಾ ಏನಾಗುತ್ತಿದೆ ಹೇಳು? ಕೆಲವರು ಪುರಿಗೆ, ಕೆಲವರು ಗಂಗಾಸಾಗರಕ್ಕೆ ಓಡುತ್ತಿದ್ದಾರೆ. ಕ್ಷಿರೋದೆ ಗಂಗಾಸಾಗರಕ್ಕೆ ಹೋಗುವುದಾದರೆ ಅವನಿಗೆ ಒಂದು ಕಂಬಳಿ ತಂದುಕೊಡು" ಎಂದರು. ಇವರಿಬ್ಬರ ನಡುವಿನ ಆಧ್ಯಾತ್ಮಿಕ ಸಂಬಂಧವು ಎಷ್ಟು ಗಾಢವಾಯಿತು ಎಂಬುದರ ಬಗ್ಗೆ ವಚನವೇದದಲ್ಲಿ ಇದಕ್ಕಿಂತ ಹೆಚ್ಚಿನ ಮಾಹಿತಿಯೇನೂ ದೊರಕದು.

**ಬಂಕಿಮ**

ಶ್ರೀರಾಮಕೃಷ್ಣರು ಕೊಲ್ಕತ್ತಾದ ಬಾಗ್‌ಬಜಾರ್‌ನಲ್ಲಿ ಬರುತ್ತಿರುವಾಗ ದೂರದಿಂದಲೇ ಬಂಕಿಮನನ್ನು ನೋಡಿ, "ಈತನು ಬಹಳ ಪವಿತ್ರಾತ್ಮನು" ಎಂದರು. ೨೭ ನೇ ಡಿಸೆಂಬರ್, ೧೮೮೩ ರಂದು ಮಾಸ್ಟರ್‌ನನ್ನು ಕುರಿತು, "ನಿನ್ನೊಡನೆ ಆತನನ್ನು ಕರೆತರಲಿಲ್ಲವೆ?" ಎಂದೂ ಕೇಳಿದರು; ಮಾಸ್ಟರಿಗೆ ಬಂಕಿಮನನ್ನು ಕರೆತರುವ ಜವಾಬ್ದಾರಿ ವಹಿಸಿದರು. ೨೭ ನೇ ಅಕ್ಟೋಬರ್, ೧೮೮೫ ರಂದು "ಆ ಬಾಲಕನು ಹೇಗಿದ್ದಾನೆ? ಆತನಿಗೆ ಬರಲಾಗದಿದ್ದರೆ ಹೇಳು. ಅವನಿಗೆ ಖಂಡಿತವಾಗಲೂ ಆಧ್ಯಾತ್ಮಿಕ ಜಾಗೃತಿ ಆಗುವುದು" ಎಂದು ಮಾಸ್ಟರ್ ಬಳಿ ಹೇಳಿದರು. ವಚನವೇದದಲ್ಲಿ ಬಂಕಿಮನ ಮುಂದಿನ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. ಪರಮಹಂಸರ ಸಂಪರ್ಕಕ್ಕೆ ಬಂದ ತುಕ್ಕು ಹಿಡಿದ ಕಬ್ಬಿಣವೂ ಚಿನ್ನವಾಗುವುದು. ಅಂದಮೇಲೆ, ಈ ಪರಿಶುದ್ಧ ಬಾಲಕನು ಜೀವನವನ್ನು ಸಾರ್ಥಕ ಮಾಡಿಕೊಂಡನೆಂದು ಬೇರೆ ಹೇಳಬೇಕೇನು?

**ಬಿನೋದೆ**

ಈತನೂ ಕೂಡ ಮಾಸ್ಟರ್ ಮಹಾಶಯನ ಶಾಲೆಯಲ್ಲಿ ಓದುತ್ತಿದ್ದವನೇ. ವಿವಾಹವಾಗಿದ್ದರೂ ಸಹ ದೈವಭಕ್ತನಾದ ಈತನು ಆಗಾಗ್ಗೆ ಸಮಾಧಿಯನ್ನು ಕೂಡ ಅನುಭವಿಸುತ್ತಿದ್ದ. ವಚನವೇದದಲ್ಲಿ ಈತನು ದಕ್ಷಿಣೇಶ್ವರದಲ್ಲಿ ಮತ್ತು ಬಲರಾಮ ಬೋಸನ ಮನೆಯಲ್ಲಿ ಶ್ರೀರಾಮಕೃಷ್ಣರನ್ನು ದರ್ಶಿಸಿದ ಅನೇಕ ಪ್ರಸಂಗಗಳಿವೆ. ಆದರೆ ಇವು ಬಿನೋದೆಯ ಬಗ್ಗೆ ಹೆಚ್ಚೇನೂ ಮಾಹಿತಿ ನೀಡುವುದಿಲ್ಲ. ಆದರೆ ಪರಮಹಂಸರ ಸಂಸರ್ಗದಿಂದ ಆತನ ಆಧ್ಯಾತ್ಮಿಕ ಜೀವನ ಸಮೃದ್ಧವಾಗಿರಬೇಕು ಎನ್ನುವುದರಲ್ಲಿ ಸಂಶಯವಿಲ್ಲ.

**ತೇಜಚಂದ್ರ**

ತೇಜಚಂದ್ರನನ್ನು ಮಾಸ್ಟರ್ ಮಹಾಶಯರು ಆಧ್ಯಾತ್ಮಿಕತೆಯಲ್ಲಿ ಒಲವುಳ್ಳ ಬಾಲಕನೆಂದು ಶ್ರೀರಾಮಕೃಷ್ಣರು ಬಳಿಗೆ ಕರೆತಂದರು. ಅವನು ೯ ನೇ ನವೆಂಬರ್, ೧೮೮೪ ರಂದು ಪ್ರಥಮ ಬಾರಿ ಪರಮಹಂಸರನ್ನು ಭೇಟಿ ಮಾಡಿದನು. ನಂತರ ಶ್ರೀರಾಮಕೃಷ್ಣರು ಶನಿವಾರ, ಭಾನುವಾರಗಳೂ ಬರಲು ಹೇಳಿಕಳುಹಿಸಿದರು.

೨೫ ನೇ ಫೆಬ್ರವರಿ, ೧೮೮೫ ರಂದು ಗಿರೀಶಘೋಷನ ಮನೆಯಲ್ಲಿ ಇವನನ್ನು ಸಂದರ್ಶಿಸಿದಾಗ, ಶ್ರೀರಾಮಕೃಷ್ಣರು ಮಾಸ್ಟರ್ ಬಳಿ, "ನಾನೇಕೆ ಇಂತಹ ಹುಡುಗರನ್ನು ಹೆಚ್ಚಾಗಿ ಆಕರ್ಷಿಸುತ್ತೇನೆ ಗೊತ್ತೆ? ಏಕೆಂದರೆ ಇವರೆಲ್ಲ ಪ್ರಾಪಂಚಿಕತೆಯು ಸೋಂಕದ ಪವಿತ್ರಾತ್ಮರು" ಎಂದರು.

೧೩ ನೇ ಜುಲೈ, ೧೮೮೫ ರಂದು ಬಲರಾಮನ ಮನೆಯಲ್ಲಿ ಸಂದರ್ಶಿಸಿದಾಗ ಆತನನ್ನು ಕುರಿತು, "ನೀನು ಧ್ಯಾನ, ಪ್ರಾರ್ಥನೆಗಳನ್ನು ಅಭ್ಯಾಸಮಾಡಿದರೆ ನನಗೆ ತುಂಬಾ ಸಂತೋಷವಾಗುತ್ತದೆ. ನಿನ್ನನ್ನು ನನ್ನ ಸ್ವಂತದವನಂತೆ ಕಾಣುತ್ತೇನೆ. ಆದ್ದರಿಂದಲೇ ನಿನಗೆ ನಾನು ಹೇಳಿಕಳುಹಿಸುವುದು" ಎಂದರು.

ವಚನವೇದದಲ್ಲಿ ಮುಂದಿನ ವಿವರಗಳು ನಮಗೆ ದೊರೆಯದಿದ್ದರೂ ತೇಜಚಂದ್ರನು ಶ್ರೀರಾಮಕೃಷ್ಣರ ಅಂತರಂಗ ಭಕ್ತನಾದ ಕಾರಣ ಆಧ್ಯಾತ್ಮಿಕತೆಯ ಅತ್ಯುನ್ನತ ಸ್ಥಿತಿ ತಲುಪಿರಲೇಬೇಕು.

(ಮುಂದುವರಿಯುವುದು)